512 ಶ್ರೀ ಕೃಷ್ಣಬೈರೇಗೌಡ ಸಿ ಬಿ ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಕಳೆದ ಮೂರು ವರ್ಷಗಳಲ್ಲಿ ತೆರಿಗೆಗೆ ಮೊದಲು ಹಾಗೂ ತೆರಿಗೆಯ ನಂತರ ಗಳಿಸಿದ ಲಾಭ ಹಾಗೂ ಅನುಭವಿಸಿದ ನಷ್ಟ ಎಷ್ಟು (ವರ್ಷವಾರು ಮಾಹಿತಿಯನ್ನು ನೀಡುವುದು),

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್ ದರಗಳು ದುಬಾರಿಯಾಗಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ,

ಇ) ನಗರ ಸಾರಿಗೆಯಲ್ಲಿ ಕೇವಲ ಲಾಭವನ್ನು ಗುರಿಯಾಗಿಟ್ಟುಕೊಂಡು ದರವನ್ನು ನಿಗದಿಪಡಿಸುವ ಮಾನದಂಡ ಸೂಕ್ತವೆ,

ಈ) ನಗರ ಸಾರ್ವಜನಿಕ ಸಾರಿಗೆಯಿಂದ ಲಭಿಸತಕ್ಕಂತಹ ಇತರೇ ಲಾಭಗಳಾದ ವಾಯು ಮಾಲಿನ್ಯದ ಕಡಿತ ಸಂಚಾರ ದಟ್ಟಣೆಯಲ್ಲಿ ಕಡಿತ ಹಾಗೂ ಅದರಿಂದ ಉಳಿತಾಯವಾಗುವಂತಹ ಸಮಯ ಇತ್ಯಾದಿ ಸಾಮಾಜಿಕ ಲಾಭಗಳೆಂದು ಏಕೆ ಪರಿಗಣಿಸಿ ಸಾರಿಗೆ ದರವನ್ನು ಕಡಿತಗೊಳಿಸುವುದರ ಮೂಲಕ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸುವ ಪ್ರಯತ್ನವನ್ನು ಸರ್ಕಾರವು ಏಕೆ ಮಾಡಬಾರದು?

ಮಾನ್ಯ ಸಾರಿಗೆ ಸಚಿವರು .

ಅ)

ಸಂಸ್ಥೆಗಳು	ವರ್ಷ	ತೆರಿಗೆಗೆ ಮೊದಲು ಲಾಭ/ನಷ್ಟ (ಕೋಟಿಗಳಲ್ಲಿ)	ತೆರಿಗೆಯ ನಂತರ ಲಾಭ/ನಷ್ಟ (ಕೋಟಿಗಳಲ್ಲಿ)
KSRTC	2003–04	78 56	25 87
BMTC	2003–04	102 24	80 14
NEKRTC	2003–04	8 12	–112 90 (ನಷ್ಟ)
NWKRTC	2003–04	23 26	–19 68(ನಷ್ಟ)
KSRTC	2004–05	87 14	26 63
BMTC	2004–05	108 18	80 01
NEKRTC	2004–05	–115 78 (ನಷ್ಟ)	–110 31(ನಷ್ಟ)
NWKRTC	2004–05	–123 99 (ನಷ್ಟ)	–162 38(ನಷ್ಟ)

KSRTC	2005–06	101 99	26 78
BMTC	2005–06	149 16	114 88
NEKRTC	2005–06	0 17	27 79(ನಷ್ಟ)
NWKRTC	2005–06	11 48	30 19(ನಷ್ಟ)

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಪ್ರಯಾಣ ದರಗಳು ಪ್ರಯಾಣಿಕರಿಗೆ ತೊಂದರೆಯಾಗುವಷ್ಟು ದುಬಾರಿಯಾಗಿರುವುದಿಲ್ಲ

ಇ) ನಗರ ಸಾರಿಗೆಯಲ್ಲಿ ಕೇವಲ ಲಾಭವನ್ನು ಗುರಿಯಾಗಿಟ್ಟುಕೊಂಡು ದರವನ್ನು ನಿಗದಿಪಡಿಸುತ್ತಿಲ್ಲ

ಈ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒಂದು ಉತ್ತಮ ಸಾರ್ವಜನಿಕ ನಗರ ಸಾರಿಗೆ ವ್ಯವಸ್ಥೆಯಾಗಿದ್ದು ಎಲ್ಲಾ ವರ್ಗದ ಸಾರ್ವಜನಿಕರ ಶ್ರೇಯೋಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸುತ್ತಿದ್ದು ಸಮಾಜದ ಎಲ್ಲಾ ವರ್ಗದವರಿಂದ ಆಕರ್ಷಿಸಲ್ಪಟ್ಟಿದೆ ವಾಯುಮಾಲಿನ್ಯವನ್ನು ತಡೆಗಟ್ಟಲು ಯೂರೋ–3 ಇಂಜಿನ್‌ವುಳ್ಳ ವಾಹನಗಳನ್ನು ಹಾಗೂ ಹವಾನಿಯಂತ್ರಿತ ವೋಲ್ವೋ ಬಸ್‌ಗಳನ್ನು ಸಹ ಪರಿಚಯಿಸುತ್ತಿದೆ ಈ ಎಲ್ಲಾ ಸೌಕರ್ಯಗಳನ್ನು ಒದಗಿಸಬೇಕಾದಲ್ಲಿ ಸಂಸ್ಥೆಯು ಆರ್ಥಿಕ ಸಾಮರ್ಥ್ಯವನ್ನು ಹೊಂದ ಬೇಕಾಗಿರುತ್ತದೆ ಆದುದರಿಂದ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಒತ್ತಾಯಪೂರ್ವಕವಾಗಿ ಸಾರಿಗೆ ದರವನ್ನು ಸ್ವಲ್ಪ ಮಟ್ಟಿಗೆ ಹೆಚ್ಚಿಸಿರುತ್ತದೆ

512 ಶ್ರೀಮತಿ ಭಾಗೀರಥಿ ಟಿ (ಕೊಟ್ಟೂರು) ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಟ್ಟೂರು–ಹರಿಹರ ರೈಲ್ವೆ ಕಾಮಗಾರಿಗೆ 2006–07ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು ,

ಆ) ಈ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ, ಇವುಗಳನ್ನು ಪೂರ್ಣಗೊಳಿಸಲು ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು ,

ಇ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ಸಾರ್ವಜನಿಕರ ಅನುಕೂಲಕ್ಕೆ ಒದಗಿಸಿಕೊಡಲಾಗುವುದು?